# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 750(830)

ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.08.2025

ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ತಾಲೂಕಿನ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳ 1091 ಎಕರೆ ಜಮೀನಿನಲ್ಲಿ ಕೈಗಾರಿಕೆ ಪ್ರದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ.ಯ ಪ್ರಕ್ರಿಯೆ ಲ್ಯಾಂಡ್ ಮಾಫಿಗಳು ಮತ್ತು ಬ್ರೋಕರ್ಗಳ ಉದ್ದೇಶಕ್ಕಾಗಿ ಭೂಮಿ ವಶಪಡಿಸಿಕೊಳ್ಳಲಾಗುತ್ತದೆ ಎಂಬ ದೂರು ಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕೆ ಹಾಗೂ ಕೈಗಾರಿಕೋದ್ಯಮಿಗಳ ಬೇಡಿಕೆಗಳಿಗೆ ಅನುಗುಣವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆ, ಮುಲ್ಕಿ ತಾಲ್ಲೂಕಿನ, ಕೊಲ್ಲೂರು, ಬಳಕುಂಜೆ ಮತ್ತು ಉಳಿಪಾಡೆ ಗ್ರಾಮಗಳಲ್ಲಿಯೂ ಸಹ ಮಂಡಳಿಯು 1091-00 ಎಕರೆ ಪ್ರದೇಶಗಳನ್ನು ಸ್ವಾಧೀನಪಡಿಸಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ. ಸದರಿ ಪ್ರದೇಶದಲ್ಲಿ ಹಾಲಿ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಅಧಿಸೂಚಿತ ಒಟ್ಟು 1091-00 ಎಕರೆ ಪ್ರದೇಶದಲ್ಲಿ ಸುಮಾರು ಶೇ.90 ಕ್ಕಿಂತಲೂ ಹೆಚ್ಚಿನ ರೈತರುಗಳು ಭೂಸ್ವಾಧೀನ ಪ್ರಕ್ರಿಯೆಯನ್ನು ಬೆಂಬಲಿಸಿರುವುದು ಕಲಂ 28(3)ರ ವಿಚಾರಣೆ ವೇಳೆಯಲ್ಲಿ ಕಂಡುಬಂದಿರುತ್ತದೆ.<br><br>ಉಳಿದಂತೆ ವಿರೋಧ ವ್ಯಕ್ತಪಡಿಸಿದ ಸುಮಾರು 191-00 ಎಕರೆ ಜಮೀನಿನಲ್ಲಿ ಒಂದೊಮ್ಮೆ ಕಟ್ಟಡಗಳು, ವಾಸದ ಮನೆಗಳು, ಮತ್ತಿತರೆ ಅಭಿವೃದ್ಧಿ ಚಟುವಟಿಕೆಗಳು ನಡೆದಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಭೂಮಾಲೀಕರುಗಳಿಗೆ ಅನಾನುಕೂಲವಾಗದಂತೆ ಕ್ರಮವಹಿಸಲಾಗುತ್ತದೆ. |
| ಆ) | 2017 ರಲ್ಲಿ ಮುಲ್ಕಿ ತಾಲೂಕಿನ ಕರ್ನಿರೆ, ಅತಿಕಾರಿ ಬೆಟ್ಟು, ತೆಂಕ ಎಕ್ಕಾರು ಗ್ರಾಮಗಳನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧಾರ ಕ್ರಮ ಕೈಗೊಳ್ಳಲಾಗಿದ್ದು, ತದನಂತರ ಈ ಗ್ರಾಮಗಳನ್ನು ಬದಲಾವಣೆ ಮಾಡಲು ಕಾರಣವೇನು; (ವಿವರ ನೀಡುವುದು) | ದಿನಾಂಕ:06-02-2020 ರಂದು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆ.ಐ.ಎ.ಡಿ.ಬಿ. ರವರು ಗುರುತಿಸಿದ್ದ ಕರ್ನಿರೆ, ಅತಿಕಾರಿ ಬೆಟ್ಟು ಮತ್ತು ಕವತ್ತಾರು ಗ್ರಾಮದ ಜಮೀನಿಗೆ ಇತ್ತೀಚೆಗೆ ಭೇಟಿ ನೀಡಿ ಪರಿಶೀಲಿಸಿದ್ದು, ಸದರಿ ಜಮೀನು ಬದಲು ಬಳ್ಕುಂಜೆ ಹಾಗೂ ಇನ್ನಿತರೆ ಗ್ರಾಮಗಳಲ್ಲಿ ಜಾಗವನ್ನು ಗುರುತಿಸಲು ಸೂಚಿಸಿದಂತೆ, ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಲಾಗಿದೆ. |

<table>
<tr>
<td>ಇ)</td>
<td>ಪ್ರಸ್ತುತ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಗಳು ಕೃಷಿ ಭೂಮಿಗಳಾಗಿದ್ದು, ಸಣ್ಣ ಹಿಡುವಳಿದಾರರು ಮತ್ತು ಪ್ರಸ್ತುತ ಸ್ಥಳವು ಕೈಗಾರಿಕೆ ನಡೆಸಲು ಮೂಲಭೂತ ಸೌಕರ್ಯ ಇಲ್ಲದೆ ಗುಡ್ಡ ಪ್ರದೇಶಗಳಾಗಿದ್ದು, ಈ ಸ್ಥಳವು ಕೈಗಾರಿಕೆ ಸ್ಥಾಪಿಸಲು ಅಸಾಧ್ಯ ಪರಿಸ್ಥಿತಿ ಇದ್ದು, ಸದರಿ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಸರ್ಕಾರದ ನಿಲುವೇನು;</td>
<td rowspan="2">ದಿನಾಂಕ: 24.07.2025 ರಂದು ಪ್ರಸ್ತಾವಿತ ಅಧಿಸೂಚಿತ ಪ್ರದೇಶಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೆಐಎಡಿಬಿ ಹಾಗೂ ವಿಶೇಷ ಭೂಸ್ವಾಧಿನಾಧಿಕಾರಿ, ಅಭಿವೃದ್ಧಿ ಅಧಿಕಾರಿ ಮಂಗಳೂರು ಇವರು ಜಂಟಿಯಾಗಿ ಸ್ಥಳ ತನಿಖೆ ನಡೆಸಿದ್ದು, ಸದರಿ ಪ್ರದೇಶದಲ್ಲಿ ಇರುವ ವಾಸದ ಮನೆ ಹಾಗೂ ಇತರೆ ಅಭಿವೃದ್ಧಿ ಚಟುವಟಿಕೆಗಳು ಜೊತೆಯಲ್ಲಿ ಸದರಿ ಪ್ರದೇಶವು ಕೈಗಾರಿಕೆ ಸ್ಥಾಪನೆಗೆ ಪೂರಕವಾಗಿದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಟೋಪೊಲಾಜಿಕಲ್ ಸರ್ವೆ ನಡೆಸಿ ಭೌಗೋಳಿಕ ಪ್ರದೇಶದ ವಿವರ ಮತ್ತು ಮಾನವ ನಿರ್ಮಿತ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು ಸೂಕ್ತ ತೀರ್ಮಾನ ತೆಗೆದುಕೊಳ್ಳಲು ನಿರ್ಣಯಿಸಲಾಗಿರುತ್ತದೆ.<br><br>ದಿನಾಂಕ:06.02.2020 ರಂದು ಮಾನ್ಯ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಬಳ್ಕುಂಜೆ ಹಾಗೂ ಇನ್ನಿತರೆ ಗ್ರಾಮಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸೂಚಿಸಿರುತ್ತಾರೆ.<br><br>ಮಂಗಳೂರು ತಾಲ್ಲೂಕು ಮುಡುಪಿನ ಕೆನರಾ ಕೈಗಾರಿಕಾ ಪ್ರದೇಶದಲ್ಲಿ ಸ್ವಾಧೀನಪಡಿಸಿದ 585-66 ಎಕರೆ ವಿಸ್ತೀರ್ಣವನ್ನು ಅಭಿವೃದ್ಧಿಪಡಿಸಿ ಹಂಚಿಕೆಗೆ ಲಭ್ಯ ವಿರುವ 342-17 ಎಕರೆಯಲ್ಲಿ 114-16 ಎಕರೆ ವಿಸ್ತೀರ್ಣ ಹಂಚಿಕೆಯಾಗಿದ್ದು, ಉಳಿದ 228-01 ಎಕರೆ ವಿಸ್ತೀರ್ಣಕ್ಕೆ Environmental Clearance ಪಡೆಯಲು ಬಾಕಿ ಇದ್ದು ಮುಂದಿನ ದಿನಗಳಲ್ಲಿ ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತದೆ.<br><br>ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಕೈಗಾರಿಕೋದ್ಯಮಕ್ಕೆ ಬೇಡಿಕೆ ಇದ್ದು, ಆ ಭಾಗದ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳ ಬಳಕೆ ಹಾಗೂ ರಾಜ್ಯದಾದ್ಯಂತ ಸಮತೋಲಿತ ಅಭಿವೃದ್ಧಿಗಳಿಗೆ ಪೂರಕವಾಗಿ ಕ್ರಮವಹಿಸಬೇಕಾಗಿರುವುದರಿಂದ ಪ್ರಸ್ತಾವಿತ ಪ್ರದೇಶವನ್ನು ಆಯ್ಕೆ ಮಾಡಿ ಸ್ವಾಧೀನಪಡಿಸಲು ಕ್ರಮ ಕೈಗೊಳ್ಳಲಾಗಿದೆ.</td>
</tr>
<tr>
<td>ಈ)</td>
<td>ಸದರಿ ಪ್ರದೇಶಗಳಿಗೆ ಇಲಾಖೆಯು ಭೇಟಿ ನೀಡಿ ಸ್ಥಳೀಯರ ಜನರೊಂದಿಗೆ ಮಾತುಕತೆ ನಡೆಸಲಾಗಿದೆಯೇ; ಸಂಗ್ರಹಿಸಿದ ಮಾಹಿತಿ ಏನು; (ವಿವರ ನೀಡುವುದು) ಯಾವ ಕಾರಣಕ್ಕಾಗಿ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಭೂಮಿಯನ್ನು ವಶಪಡಿಸಿಕೊಳ್ಳಲು ತೀರ್ಮಾನಿಸಲಾಗಿದೆ;; ಮಂಗಳೂರು ತಾಲ್ಲೂಕು ಮುಡುಪಿನಲ್ಲಿ ಸ್ವಾಧೀನಪಡಿಸಿದ 300 ಎಕರೆ ಭೂಮಿ ನಿರುಪಯುಕ್ತ ಆಗಿ ಬಳಕೆ ಆಗದೇ ಸರ್ಕಾರದ ಬೊಕ್ಕಸಕ್ಕೆ ಉಂಟಾದ ನಷ್ಟ ಎಷ್ಟು; ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳಲ್ಲಿ ಮಾಡಲು ಉದ್ದೇಶಿಸಲು ಕಾರಣವೇನು? (ವಿವರ ನೀಡುವುದು)</td>
</tr>
</table>

**ಸಂಖ್ಯೆ: ಸಿಐ 434 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು